# ಪಟ್ಟಭದ್ರಾಸನ

**ತಿಪ್ಪೇಶಿಗೆ ಕನ್ನಡವನ್ನು ತಪ್ಪಿಲ್ಲದಂತೆ ಓದಲು ಬರುತ್ತದೆ. ಏಕೆಂದರೆ ಅವನಿನ್ನೂ ಟಿ.ವಿ.ಯ ಕನ್ನಡ ನ್ಯೂಸ್ ಚಾನೆಲ್‌ಗಳಲ್ಲಿ ಕೆಲಸ ಮಾಡಿಲ್ಲ. ಆದರೆ ಅವನಿಗೆ ಆ ಪುಸ್ತಕದಲ್ಲಿನ ಯೋಗಾಸನಗಳ ಹೆಸರುಗಳನ್ನು ಓದಲು ಸಾಧ್ಯವಾಗಲೇ ಇಲ್ಲ!**

**★ ಎಚ್. ಆನಂದರಾಮ ಶಾಸ್ತ್ರೀ**

‘ಯೋಗ ಮಾಡಿ ಸುಖ ಹೊಂದಿರಿ’ ಎಂಬ ಸಂದೇಶವನ್ನು ಸರ್ಕಾರವು ದಿನಕ್ಕೊಂದು ಸ್ಟೈಲಿನಲ್ಲಿ ಪ್ರಜಾಕೋಟಿಯ ಮೊಬೈಲ್‌ಗಳಿಗೆ ರವಾನಿಸಿ ಕೃತ ಕೃತ್ಯವಾಯಿತು. ಸ್ವಿಸ್ ಬ್ಯಾಂಕಿನ ಹಣ ಮಾತ್ರ ಇನ್ನೂ ಬಂದಿಲ್ಲ. ‘ಅದಕ್ಕೂ ಯೋಗ ಕೂಡಿಬರಬೇಕು’ ಎನ್ನುತ್ತದೆಯೆ ಸರ್ಕಾರ? ಆ ಯೋಗ ಯಾವುದು ಮತ್ತು ಯಾವಾಗ ಕೂಡಿ ಬರುತ್ತದೆ ಎಂಬುದನ್ನು ತಿಳಿಯಲು ಪ್ರಜಾಕೋಟಿಯು ಕಾತರಗೊಂಡಿದೆ. ಆ ಯೋಗದ ಬೆನ್ನು ಹತ್ತಲು ಸರ್ಕಾರವು ಆಯೋಗ ರಚಿಸಿ ಇನ್ನು ನಾಲ್ಕು ವರ್ಷಗಳನ್ನು ದೂಡಲು ಅಡ್ಡಿಯಿಲ್ಲ.

ಯೋಗವನ್ನು ಕಂಡುಹಿಡಿದದ್ದು ಪತಂಜಲಿಯೇ, ಶ್ರೀರಾಮನೇ, ಯೇಸುಕ್ರಿಸ್ತನೇ ಎಂಬ ಪ್ರಶ್ನೆ ಇತ್ತೀಚೆಗಷ್ಟೇ ಹುಟ್ಟಿಕೊಂಡು ಜಿಜ್ಞಾಸೆಯಲ್ಲಿದೆ. ಉತ್ತರವು ಶೀಘ್ರದಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವುದು. ‘ನಮ್ಮ ಪೂರ್ವಜರು ತಂತಮ್ಮ ಕಾಯಕಗಳಿಗೆ ಅನುಸರಿಸುತ್ತಿದ್ದ ವಿವಿಧ ಬಂಗಿಗಳನ್ನೇ ಅಷ್ಟಿಷ್ಟು ಮಾರ್ಪಾಟು ಮಾಡಿ ಸಂಸ್ಕೃತದ ಹೆಸರುಗಳನ್ನಿಟ್ಟು ಕೆಲವು ಬುದ್ಧಿವಂತರು ಯೋಗವೆಂದು ಘೋಷಿಸಿದರು’ ಎಂಬ ‘ಭಂಗಿ ಬಸಜ್ಜ’ನ ಮಾತುಗಳನ್ನೂ ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.



ಭರತಮುನಿಯು ನಾಟ್ಯವನ್ನೂ, ಸುಶ್ರುತನು ಮೆಡಿಕಲ್ಲನ್ನೂ, ಪಾಣಿನಿಯು ಸಂಸ್ಕೃತ ವ್ಯಾಕರಣವನ್ನೂ, ಪತಂಜಲಿಯು ಯೋಗಸೂತ್ರವನ್ನೂ, ವಾತ್ಸಾಯನನು ಕಾಮಸೂತ್ರವನ್ನೂ ಮತ್ತು ಏವನ್ ಲೇಡೀಸ್ ಟೈಲರ್ ರುಕ್ಕೋಜಿಯು ಅತಿ ಕಡಿಮೆ ಬಟ್ಟೆಯುಳ್ಳ ರವಿಕೆಯನ್ನೂ ಅತ್ಯಂತ ಜನಪ್ರಿಯಗೊಳಿಸಿದರು. (ಇವೆಲ್ಲ ಚಾಲ್ತಿಯಲ್ಲಿ ಮೊದಲೇ ಇದ್ದವು.) ಯೋಗವು 2015ನೇ ಇಸ್ವಿ ಜೂನ್ 21 ರಿಂದ ಜಾಗತಿಕ ಮೌಲ್ಯ ಪಡೆದುಕೊಂಡಿರುವುದರಿಂದ ಇನ್ನು ಇದು ಪೇಟೆಂಟ್ ಮತ್ತು ಪೇಷೆಂಟ್ ಎರಡನ್ನೂ ಆಕರ್ಷಿಸುವುದು ಶತಃಸಿದ್ಧ.

ತಿಪ್ಪೇಶಿಯ ಯೋಗ ಎಂಥಾದ್ದು ಅಂತೀರಿ! ಅವನಿಗೆ ಅದ್ಯಾರೋ ‘ಸಂಘ’ಟಕರು ಯೋಗಾಸನಗಳ ಪುಸ್ತಕವೊಂದನ್ನು ಸಂಪೂರ್ಣ ಉಚಿತವಾಗಿ ಕೊಟ್ಟರು. ತಿಪ್ಪೇಶಿಗೆ ಕನ್ನಡವನ್ನು ತಪ್ಪಿಲ್ಲದಂತೆ ಓದಲು ಬರುತ್ತದೆ. ಏಕೆಂದರೆ ಅವನಿನ್ನೂ ಟಿ.ವಿ.ಯ ಕನ್ನಡ ನ್ಯೂಸ್ ಚಾನೆಲ್‌ಗಳಲ್ಲಿ ಕೆಲಸ ಮಾಡಿಲ್ಲ. ಆದರೆ ಅವನಿಗೆ ಆ ಪುಸ್ತಕದಲ್ಲಿನ ಯೋಗಾಸನಗಳ ಹೆಸರುಗಳನ್ನು ಓದಲು ಸಾಧ್ಯವಾಗಲೇ ಇಲ್ಲ. ಗಣೇಶ ಗುಡಿಯ ಅರ್ಚಕರ ಬಳಿಗೆ ಪುಸ್ತಕ ಕೊಂಡೊಯ್ದ. ಅವರೂ ತಪ್ಪು ತಪ್ಪಾಗಿ ಓದಿದರು. ಅಪಾರವಾಗಿ ತೊದಲಿದರು. ತಿಪ್ಪೇಶಿಯು ಪುಸ್ತಕವನ್ನು ಮನೆಗೆ ವಾಪಸ್ ತಂದು, ಉಚಿತ ಯೇಸುವಾಣಿ, ಉಚಿತ ಬೈಬಲ್‌ವಾಣಿ, ಉಚಿತ ಭಗವದ್ಗೀತೆ ಇವುಗಳೊಡನೆ ಸೇರಿಸಿಬಿಟ್ಟ.

ಚೋದ್ಯವೆಂದರೆ, ಜೂನ್ 21 ರಂದು ತಿಪ್ಪೇಶಿಯು ತನ್ನ ಧಣಿಯ ಹೊಲದಲ್ಲಿ ಕಳೆ ಕೀಳುತ್ತಿದ್ದಾಗ ಅದನ್ನು ನೋಡಿದ ವಿದ್ವಾಂಸರು ಅವನ ಆ ಭಂಗಿಗೆ ‘ನತಮಸ್ತಕಭುಜ ಕಾರ್ಯಹಸ್ತಾಸನ’ ಎಂದು ಹೆಸರಿಟ್ಟಿರುವುದು! ಈ ಹೆಸರನ್ನು ಹೇಳುವುದಕ್ಕಿಂತಲೂ ಆಸನ ಮಾಡುವುದೇ ಸುಲಭ ತಿಪ್ಪೇಶಿಗೆ.

ಸರ್ಕಾರವು ಯೋಗವನ್ನು ಜನಪ್ರಿಯಗೊಳಿಸ ಹೊರಟಿರುವುದಕ್ಕೆ ಕಾರಣವು, ಅತಿಶಯ ವೈಚಾರಿಕರ ಅನುಸಾರ, ಇಂತಿದೆ: ಯೋಗದಲ್ಲಿ ಆಸನಗಳಿವೆ. ಆಸನಗಳು ಸರ್ಕಾರಕ್ಕೆ ಎಂದಿಗೂ ಪ್ರಿಯ. ಆಸನಗಳನ್ನು ಜನಪ್ರಿಯಗೊಳಿಸಿದರೆ ಸರ್ಕಾರಕ್ಕೆ ಆಸನಗಳ ಲಭ್ಯತೆ ಹೆಚ್ಚಬಹುದೆಂದು ಅಂದಾಜು. ‘ಯೋಗಾಸನಕ್ಕೂ ಆಸನಯೋಗಕ್ಕೂ ಇರುವ ಸಂಬಂಧ: ಒಂದು ಮನೋವಿಜ್ಞಾನೋ ಸಮಾಜೋ ರಾಜಕಾರಣೋ ಆರೋಗ್ಯ ಅಧ್ಯಯನ’ ಎಂಬ ವಿಷಯದ ಬಗ್ಗೆ ಪಿಎಚ್‌ಡಿ ಮಾಡುತ್ತೇವೆಂದು ಈಗಾಗಲೇ ಇನ್ನೂರು ಮಂದಿ ಕರುನಾಡು ಹೋಪನ್ ಯೂನಿವರ್ಸಿಟಿಗೆ ಅರ್ಜಿ ಸಲ್ಲಿಸದ್ದಾರೆ. ಇವರೆಲ್ಲರೂ ಒಂದೇ ವಿಷಯವನ್ನು ಸಂಶೋಧನೆಗೆ ಎತ್ತಿಕೊಳ್ಳಲು ಕಾರಣ ಅಂತರ್ಜಾಲ. ಆದರೆ, ಓ ಮೈ ಗಾಡ್, ಕರುನಾಡು ಹೋಪನ್ ಯೂನಿವರ್ಸಿಟಿಯ ಮಾನ್ಯತೆಯೇ ಕಳೆದ ವಾರ ರದ್ದಾಗಿದೆ! ಇದರೆಲ್ಲ ಇನ್ನು, ಅಸ್ಸಾಂ, ಮಣಿಪುರ, ಮಿಜೊರಾಂ, ಟಿಂಬಕ್ಟು, ಟ್ರಿನಿಡಾಡ್ ಅಂಡ್ ಟೊಬ್ಯಾಗೋಗಳ ಯೂನಿವರ್ಸಿಟಿಗಳನ್ನು ಹುಡುಕಿಕೊಂಡು ಹೋಗಬೇಕು. ಹೋಗಬೇಕಾದ ಅಗತ್ಯವಿಲ್ಲ, ಅಂತರ್ಜಾಲದಲ್ಲೇ ಎಲ್ಲ ಲಭ್ಯ. ಪಿಎಚ್‌ಡಿಯ ಪ್ರಮಾಣಪತ್ರವೂ!

‘ಯೋಗವು ಶ್ರೀಮಂತರಿಗೆ ಮತ್ತು ಸೋಮಾರಿಗಳಿಗೆ ಮಾತ್ರ’ ಎಂಬ ಹೇಳಿಕೆಯೊಂದು ಈಚೆಗೆ ಭಾರೀ ಲವಲವಿಕೆ ಹುಟ್ಟಿಸಿ ತಣ್ಣಗಾಯಿತು. ಶ್ರೀಮಂತರನೇಕರು ಈ ಹೇಳಿಕೆಯನ್ನು ವಿರೋಧಿಸುವ ಮೂಲಕ, ತಾವು ಸೋಮಾರಿಗಳಲ್ಲವೆಂದು ತೋರ್ಪಡಿಸಿಕೊಂಡರು. ಇತರ ಸೋಮಾರಿಗಳು ಸುಮ್ಮನೇ ಯೋಗ ಮಾಡುತ್ತ ಅಥವಾ ಮಾಡದೆಯೇ ಸುಮ್ಮನೆ ಕುಳಿತಿರಬಹುದು. ಮೇಲ್ಕಂಡ ಹೇಳಿಕೆಗೆ ಭಾರೀ ವಿರೋಧ ಉಂಟಾದ್ದರಿಂದ ಎರಡು ಸಂಗತಿಗಳು ಸ್ಪಷ್ಟವಾದಂತಾಯಿತು.

ಒಂದು, ‘ದೈಹಿಕ ಶ್ರಮವಿಲ್ಲದ ಬೌದ್ಧಿಕ ಕೆಲಸಗಾರರು ಸೋಮಾರಿಗಳೆನ್ನಿಸಿಕೊಳ್ಳದಿದ್ದರೂ ಯೋಗ ಮಾಡುತ್ತಾರಾದ್ದರಿಂದ ಸದರಿ ಹೇಳಿಕೆಯನ್ನು ‘ದೈಹಿಕ ಸೋಮಾರಿಗಳಿಗೆ ಮಾತ್ರ’ ಎಂದು ತಿದ್ದುವುದು ಸೂಕ್ತ.’ ಎರಡು, ‘ಯೋಗವು ಶ್ರೀಮಂತರಿಗಷ್ಟೇ ಅಲ್ಲ, ಬಡವರಿಗೂ ಅವಶ್ಯ; ಆದರೆ, ಶ್ರೀಮಂತರು ಕಾರಿನಲ್ಲಿ ಉದ್ಯಾನವನಕ್ಕೆ ಹೋಗಿ ವಾಕ್ ಮಾಡಿದರೆ, ದುಡ್ಡು ಕೊಟ್ಟು ಜಿಮ್‌ಗೆ ಹೋಗಿ ವ್ಯಾಯಾಮ ಮಾಡಿದರೆ, ತರಗತಿಗೆ ಸೇರಿ ಆಸನ ಕಲಿತು ಯೋಗ ಮಾಡಿದರೆ, ಬಡವರು, ಖಾಲಿ ಹೊಟ್ಟೆ ತುಂಬಿಸಿಕೊಳ್ಳಲು, ನಿತ್ಯಕಾಯಕದಲ್ಲೇ ಇವೆಲ್ಲವನ್ನೂ ಮಾಡುತ್ತಾರೆ.’ ಹೇಳಿಕೆಗಳನ್ನು ನೀಡುವವರು, ಇನ್ನು ಮುಂದೆ, ತಮ್ಮ ವಾಕ್ಯರಚನೆಯ ಬಗ್ಗೆ ವಿದ್ವಾಂಸರಿಂದ ಮತ್ತು ವ್ಯಾಕರಣ ಪಂಡಿತರಿಂದ ಮಾರ್ಗದರ್ಶನ ಪಡೆದು ಅದರನುಸಾರ ವಾಕ್ಯ ರಚಿಸಿ ಹೇಳಿಕೆ ನೀಡತಕ್ಕದ್ದು.

ಏನೇ ಆಗಲಿ, 2015 ಜೂನ್ 21 ರಿಂದ ಯೋಗವು ವಿಶ್ವ ಪ್ರಸಿದ್ಧ ವಾದದ್ದಂತೂ ಸತ್ಯ. ಇದರ ಕೀರ್ತಿಯು ನಮ್ಮ ದೇಶಕ್ಕೆ ಸಲ್ಲುತ್ತದೆ. 2014 ರಿಂದ ನಮ್ಮ ದೇಶವು ಸ್ವಚ್ಛವಾಗತೊಡಗಿದೆ. 2019ಕ್ಕೆ ಸಂಪೂರ್ಣ ಸ್ವಚ್ಛ ವಾಗುತ್ತದೆ. 2015ಕ್ಕೆ ಯೋಗವು ಎಸ್ಸೆಮ್ಮೆಸ್ಸ್ ಇತ್ಯಾದಿಯಾಗಿ ಜನಕೋಟಿ ಯನ್ನು ವ್ಯಾಪಿಸಿದೆ. 2019ರ ನಂತರ ಅದು ಸರ್ಕಾರದ ಯೋಗವನ್ನು ಅವಲಂಬಿಸಿ ಗತಿ ಕಾಣುತ್ತದೆ. ಸ್ವಿಸ್ ಬ್ಯಾಂಕಿನ ಹಣ ಮಾತ್ರ 2019ರ ಅನಂತರವೇ ವಾಪಸ್ ಬರಲು ಸಾಧ್ಯ. ಪ್ರೊಸೀಜರ್‌ಗಳು ಬಹಳ ಇವೆ. ಎಲೆಕ್ಷನ್ನಿಗೆ ಮೊದಲು ಇದು ಗೊತ್ತಿರಲಿಲ್ಲ. ಸ್ವಿಸ್ ಹಣ ಬರಬೇಕಾದರೆ ಸರ್ಕಾರಕ್ಕೆ ಯೋಗ ಕೂಡಿ ಬರಬೇಕು, ಆಸನ ಭದ್ರವಾಗಿರಬೇಕು ಮತ್ತು ಪ್ರೊಸೀಜರ್‌ಗಳು ನಡೆಯುತ್ತಲೇ ಇರಬೇಕು. ಇದನ್ನು ಪಟ್ಟಭದ್ರಾಸನ ಎಂದು ಕರೆಯಬಹುದೆ?